# ಅಮೃತತ್ವ ಪ್ರಾಪ್ತಿ ಹೇಗೆ?

ಡಾ. ರೂಪಾ

ಭಗವದ್ಗೀತೆಯಲ್ಲಿ ಬರುವ ಸಾಧನೆಯ ಅಂಶಗಳನ್ನು ಒಂದೆಡೆ ಸೇರಿಸಿ ಮುಕ್ತಿಯ ಅಭಿಲಾಷೆಗೆ ಪುಷ್ಟಿ ನೀಡಿರುವ ಲೇಖಕಿ ಸಂಸ್ಕೃತ ಪ್ರಾಧ್ಯಾಪಕರು, ಮೈಸೂರಿನ ನಿವಾಸಿ.

'ಅಮೃತತ್ವ' ಎಂದರೆ ಮರಣವಿಲ್ಲದೇ ಇರುವುದು, ನಾಶವಾಗದೇ ಇರುವುದು. ಇದು ಅಸಾಧ್ಯವಾದ ಒಂದು ಸ್ಥಿತಿಯೆಂದು ನೀವು ಭಾವಿಸಿರಬಹುದು. ಸೃಷ್ಟಿಸಲ್ಪಟ್ಟ ಎಲ್ಲ ವಸ್ತುಗಳೂ, ಜೀವಿಗಳೂ ಇಂದಲ್ಲ ನಾಳೆ ಸಾಯಲೇಬೇಕಲ್ಲ, ಇದೇ ಪ್ರಕೃತಿಯ ನಿಯಮ ಎಂದು ನೀವು ತಿಳಿದಿದ್ದರೆ ಅದು ಸರಿಯೇ. ಆದ್ದರಿಂದಲೇ ಇಲ್ಲಿ ಮರಣ ಎಂದರೆ ದುಃಖ; ದುಃಖವಿಲ್ಲದಿರುವುದೇ ಅಮೃತತ್ವ ಎಂದು ವ್ಯಾಖ್ಯಾನಿಸಿರುವೆ. ಅಂದರೆ ಶಾಶ್ವತವಾದ ಸುಖ ಅಥವಾ ಆನಂದಗಳನ್ನು ಪಡೆಯುವುದು. ಈ ದುಃಖನಿವೃತ್ತಿ ಮತ್ತು ಆನಂದಪ್ರಾಪ್ತಿ ಬೇರೆ ಬೇರೆ ಘಳಿಗೆಗಳಲ್ಲಿ ಸಂಭವಿಸುವುದಿಲ್ಲ. ಇವೆರಡೂ ಒಮ್ಮೆಗೇ ಆಗುವಂತಹ ಅನುಭವ. ಜೀವಿಯ ಎಲ್ಲ ದುಃಖಕ್ಕೂ ಕಾರಣವಾಗಿರುವುದು ಅವನ ದೇಹ ಇಂದ್ರಿಯಗಳೊಂದಿಗಿನ ತಾದಾತ್ಮ್ಯ. ಇದರಿಂದ ಜೀವಿಯು ಇತರ ವಸ್ತುಗಳಿಗೆ ಹಾಗೂ ವ್ಯಕ್ತಿಗಳೊಂದಿಗೆ ಸಂಬಂಧಗಳನ್ನು ಬೆಳೆಸಿಕೊಂಡು ಮರಣವು ಬಂದಾಗ ಇವುಗಳಿಂದ ದೂರಾಗಬೇಕೆಂಬ ದುಃಖ ಭಯಗಳಿಗೆ ಈಡಾಗುತ್ತಾನೆ. ತನ್ನಲ್ಲೇ ಇರುವ ಚೈತನ್ಯದ ಪರಿಚಯವಾದಾಗ ಮಾತ್ರ ಅವನು ಎಲ್ಲ ಭಯಗಳಿಂದಲೂ ಮುಕ್ತನಾಗಬಲ್ಲ. ಅದೇ ಆನಂದದ ಸ್ಥಿತಿ. ಇದೇ ಪರತತ್ತ್ವ, ಮೋಕ್ಷ, ಮುಕ್ತಿ. ಇದೇ ಅತ್ಯಂತ ಉತ್ಕೃಷ್ಟವಾಗಿದ್ದು ಇದಕ್ಕಿಂತ ಮಿಗಿಲಾದದ್ದು ಇನ್ನೊಂದಿಲ್ಲವಾದ್ದರಿಂದ ಇದು 'ಪರ' 'ಪರಂ' 'ಪರತತ್ತ್ವ'. ಎಲ್ಲಾ ವಿಧವಾದ ದುಃಖಗಳಿಂದಲೂ ಆತ್ಯಂತಿಕವಾಗಿ ಬಿಡುಗಡೆ ಹೊಂದುವುದರಿಂದ ಇದು ಮೋಕ್ಷ ಅಥವಾ ಮುಕ್ತಿ. ಇದನ್ನು ಪಡೆದಾಗ ಇನ್ನು ಸಂಸರಣ ಅಥವಾ ಚಲನೆ ಇರುವುದಿಲ್ಲವಾದ್ದರಿಂದ ಇದೇ ಪರಾಶಾಂತಿ.

ಅಮೃತತ್ವ ಎಂಬುದು ಕ್ಷಣಿಕ ಸ್ಥಿತಿಯಲ್ಲ. ಇದನ್ನು ಕ್ಷಯಿಸುವ ಶರೀರದಲ್ಲಾಗಲಿ, ಕರ್ಮೇಂದ್ರಿಯಗಳಾದ ವಾಕ್-ಪಾಣಿ-ಪಾಯು-ಪಾದ-ಉಪಸ್ಥಗಳಲ್ಲಾಗಲಿ, ಜ್ಞಾನೇಂದ್ರಿಯಗಳಾದ ಚಕ್ಷುಃ-ಶ್ರೋತ್ರ-ಘ್ರಾಣ-ರಸನಾ-ತ್ವಕ್‌ಗಳಲ್ಲಾಗಲಿ, ನಿರಂತರವಾಗಿ ಬದಲಾಗುವ ಇಂದ್ರಿಯಗಳ ವಿಷಯಗಳಾದ ರೂಪ-ಶಬ್ದ-ಗಂಧ-ರಸ-ಸ್ಪರ್ಶಗಳಲ್ಲಾಗಲಿ ಪಡೆಯಲು ಸಾಧ್ಯವಿಲ್ಲ. ಇದನ್ನು ಅವಿನಾಶಿಯಾದ ಪರಮಾತ್ಮನಲ್ಲಿ ಮಾತ್ರ ಹೊಂದಲು ಸಾಧ್ಯ. ಶಾಶ್ವತವಾದ ಅಮೃತತ್ವಕ್ಕೆ ಪರಮಾತ್ಮನೇ ಆಶ್ರಯ ಎಂಬುದನ್ನು ಭಗವದ್ಗೀತೆಯ ಈ ಶ್ಲೋಕದಲ್ಲಿ ಶ್ರೀಕೃಷ್ಣನೇ ಹೇಳಿದ್ದಾನೆ:

**ಬ್ರಹ್ಮಣೋ ಹಿ ಪ್ರತಿಷ್ಠಾಽಹಮಮೃತಸ್ಯಾವ್ಯಯಸ್ಯ ಚ |**
**ಶಾಶ್ವತಸ್ಯ ಚ ಧರ್ಮಸ್ಯ ಸುಖಸ್ಯೈಕಾಂತಿಕಸ್ಯ ಚ ||** (೧೪.೨೭)

"ಏಕೆಂದರೆ, ನಾನು, ಅವ್ಯಯವೂ, ಅಮೃತವೂ ಆಗಿರುವ ಬ್ರಹ್ಮಕ್ಕೆ, ಶಾಶ್ವತವಾದ ಧರ್ಮಕ್ಕೆ, ಕೊರತೆಯಿಲ್ಲದ ಸುಖಕ್ಕೆ ಆಧಾರವಾಗಿದ್ದೇನೆ." ಹಾಗಾದರೆ ಈ ಪರಮಾತ್ಮನನ್ನು ಎಲ್ಲಿ ಅರಸಬೇಕು? ಪರಮಾತ್ಮನು ಎಲ್ಲರಲ್ಲೂ ಅವರವರ ಹೃದಯದಲ್ಲಿಯೇ ನೆಲೆಸಿದ್ದಾನೆ. ಈಶ್ವರನು ಎಲ್ಲ ಪ್ರಾಣಿಗಳ ಹೃದಯದಲ್ಲಿಯೂ ನೆಲೆಸಿದ್ದಾನೆ ಎಂದು ಶ್ರೀಕೃಷ್ಣ ಗೀತೆಯಲ್ಲಿ ಹೇಳಿದ್ದಾನೆ—**ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ** (೧೮.೬೧). ನಮ್ಮೊಳಗೆ ಇರುವ ಪರಮಾತ್ಮನನ್ನು ಕಂಡುಕೊಳ್ಳಬೇಕಾದರೆ ದೈವೀ ಗುಣಗಳನ್ನು ಹೊಂದಿರಬೇಕು. ಏಕೆಂದರೆ ದೈವೀ ಗುಣಗಳು ಮೋಕ್ಷಕ್ಕೆ ಕಾರಣ: **ದೈವೀ ಸಂಪದ್ವಿಮೋಕ್ಷಾಯ** (೧೬.೫). ಈ ದೈವೀಗುಣಗಳು ಯಾವುವೆಂದರೆ: ನಿರ್ಭೀತಿ, ಅಂತಃಕರಣ ಶುದ್ಧಿ, ಜ್ಞಾನವಿಚಾರದಲ್ಲಿ ದೃಢವಾಗಿರುವುದು, ದಾನ, ಇಂದ್ರಿಯನಿಗ್ರಹ, ದೇವಪೂಜೆ, ಸ್ವಾಧ್ಯಾಯ, ತಪಸ್ಸು, ಸರಳತೆ, ಅಹಿಂಸೆ, ಸತ್ಯ, ಕ್ರೋಧವಿಲ್ಲದಿರುವಿಕೆ, ತ್ಯಾಗ, ಶಾಂತಿ, ಚಾಡಿಹೇಳದೆ ಇರುವುದು, ಪ್ರಾಣಿಗಳಲ್ಲಿ ದಯೆ, ವಿಷಯ ಲಂಪಟನಾಗದಿರುವುದು, ಮೃದುತ್ವ, ಗಾಂಭೀರ್ಯ, ಚಪಲತೆ ಇಲ್ಲದಿರುವುದು, ತೇಜಸ್ಸು, ಕ್ಷಮೆ, ಧೈರ್ಯ, ಶುಚಿ, ದ್ರೋಹ ರಾಹಿತ್ಯ ಹಾಗೂ ಅಹಂಕಾರವಿಲ್ಲದಿರುವಿಕೆ. ಗೀತೆಯಲ್ಲಿ ಹೇಳಿರುವ (೧೬.೧-೩) ಈ ದೈವೀ ಗುಣಗಳಲ್ಲಿ ಒಂದೊಂದೂ ಅಮೃತತ್ವಕ್ಕೆ ಸಾಧನ ಎಂಬುದನ್ನು ಈ ಕೆಳಗಿನ ಪರಿಶೀಲನೆಯಿಂದ ತಿಳಿಯಬಹುದು.

ಧೈರ್ಯವೇ ಅಮೃತತ್ವಕ್ಕೆ ದಾರಿ. ವೇದಗಳಲ್ಲೂ **'ಅಭೀಃ'** ಎಂದು ಹೇಳಲಾಗಿದೆ. ಸ್ವಾಮಿ ವಿವೇಕಾನಂದರೂ ಈ ಸಂದೇಶವನ್ನೇ ಸಾರಿದ್ದಾರೆ. 'ಧೈರ್ಯ' ಎಂದರೆ ಸುಖದುಃಖಗಳನ್ನು ಸಮನಾಗಿ ಸ್ವೀಕರಿಸುವುದು, ಎಂತಹ ವಿಷಮ ಪರಿಸ್ಥಿತಿಯಲ್ಲೂ ಯಾವುದೇ ವಿಕಾರಕ್ಕೊಳಗಾಗದೇ ಸಮಚಿತ್ತದಿಂದಿರುವುದು. ಈ ಸ್ಥಿತಿಯನ್ನು ಗಳಿಸುವ ಬಗ್ಗೆ ಶ್ರೀಕೃಷ್ಣನ ಮಾತುಗಳು ಇಂತಿವೆ:

"ಮಾತ್ರಾಸ್ಪರ್ಶಗಳು (ಇಂದ್ರಿಯಗಳಿಗೂ ಇಂದ್ರಿಯ ವಿಷಯಗಳಿಗೂ ಆಗುವ ಸಂಪರ್ಕ) ಶೀತ, ಉಷ್ಣ, ಸುಖ, ದುಃಖ ಇತ್ಯಾದಿಗಳನ್ನು ಕೊಡುವಂತಹವು: ಬಂದುಹೋಗುವ ಸ್ವಭಾವವುಳ್ಳವು: ಅನಿತ್ಯವಾದವು. ಎಲೈ ಅರ್ಜುನನೆ, ಇವನ್ನು ನಿರ್ವಿಕಾರಚಿತ್ತದಿಂದ ಸಹಿಸಿಕೋ. ಯಾವನನ್ನು ಈ ಮಾತ್ರಾಸ್ಪರ್ಶಗಳು ವ್ಯಥೆಗೊಳಿಸುವುದಿಲ್ಲವೋ ಅವನು ಸುಖದುಃಖಗಳಲ್ಲಿ ಸಮತ್ವವುಳ್ಳ ಧೀರ. ಅವನು ಅಮೃತತ್ವಕ್ಕೆ ಅರ್ಹ."

ಶುದ್ಧವಾದ ಮನಸ್ಸು ಮತ್ತು ನಿತ್ಯಾನಿತ್ಯ ವಸ್ತುವಿವೇಕದಿಂದ ಹೊಮ್ಮುವ ವೈರಾಗ್ಯದಿಂದ ಸಾಧಕನು ದೃಢ ಸಂಕಲ್ಪವುಳ್ಳವನಾಗುತ್ತಾನೆ. ದೇವಪೂಜೆಯಿಂದಲೂ ಅಮೃತತ್ವವನ್ನು ಪಡೆಯಬಹುದು. 'ದೇವಪೂಜೆ' ಎಂದರೆ ದೇವರ ಅನುಗ್ರಹವನ್ನು ಪಡೆಯುವ ಉದ್ದೇಶದಿಂದ ಮಾಡುವ ಕ್ರಿಯೆ. ತನ್ನಲ್ಲಿ ಹಾಗೂ ಸರ್ವಭೂತಗಳಲ್ಲೂ ಪರಮಾತ್ಮನನ್ನು ಕಾಣುವುದು ಮತ್ತು ಸರ್ವಭಾವದಿಂದ ಪರಮಾತ್ಮನನ್ನೇ ಆಶ್ರಯಿಸುವುದು ದೇವಪೂಜೆಯ ಉದ್ದೇಶ. ಶ್ರೀಕೃಷ್ಣನ ಈ ಉಕ್ತಿ ಇದಕ್ಕೆ ಆಧಾರ:

**ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ |**
**ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಂ ||**
(೧೮.೬೨)

"ಹೇ ಭಾರತ! ಎಲ್ಲ ರೀತಿಯಲ್ಲೂ, ಸಂಪೂರ್ಣವಾಗಿ ಅವನಲ್ಲೇ ಶರಣಾಗು. ಅವನ ಅನುಗ್ರಹದಿಂದ ಪರಮಶಾಂತಿಯನ್ನೂ, ಶಾಶ್ವತವಾದ ಸ್ಥಾನವನ್ನೂ (ಅಮೃತತ್ವ) ಪಡೆಯುವೆ."

**ಅಲೋಲುಪ್ತ್ವ** ಎಂದರೆ ಲೋಲುಪನಾಗದೇ ಅಸಕ್ತನಾಗಿರುವುದು ಎಂದರ್ಥ. ಅಂದರೆ, ನಿರ್ಲಿಪ್ತವಾದ ಮನಸ್ಸುಳ್ಳವನಾಗಿರುವುದು ಅಥವಾ ಮಾನಸಿಕವಾಗಿ ಅಂಟಿಕೊಳ್ಳದೆ ಇರುವುದು ಎಂದರ್ಥ. ಇದರಿಂದಲೂ ಅಮೃತತ್ವವನ್ನು ಪಡೆಯಬಹುದು. "ಯಾವುದಕ್ಕೂ ಅಂಟಿಕೊಳ್ಳದೆ ಆತ್ಮನಲ್ಲಿ ಸುಖವನ್ನು ಪಡೆಯುವವನು ಅಕ್ಷಯವಾದ ಸುಖವನ್ನು ಅನುಭವಿಸುತ್ತಾನೆ" ಎಂದು ಶ್ರೀಕೃಷ್ಣ ಹೇಳುವ ಈ ಶ್ಲೋಕವನ್ನು ನೋಡಿ–

**ಬಾಹ್ಯಸ್ಪರ್ಶೇಷ್ವಸಕ್ತಾತ್ಮಾ ವಿಂದತ್ಯಾತ್ಮನಿ ಯತ್ಸುಖಮ್ |**
**ಸ ಬ್ರಹ್ಮಯೋಗಯುಕ್ತಾತ್ಮಾ ಸುಖಮಕ್ಷಯಮಶ್ನುತೇ ||** (೫. ೨೧)

ಜ್ಞಾನದಲ್ಲಿ ಎರಡು ವಿಧ: ಲೌಕಿಕಜ್ಞಾನ ಮತ್ತು ಅಧ್ಯಾತ್ಮಜ್ಞಾನ. ಲೌಕಿಕ ವಿದ್ಯೆಯನ್ನು **ಅಪರಾ** ಎಂದು ಮುಂಡಕೋಪನಿಷತ್ತಿನಲ್ಲೂ **ಅವಿದ್ಯೆ** ಎಂದು ಈಶಾವಾಸ್ಯೋಪನಿಷತ್ತಿನಲ್ಲೂ ಹೇಳಿದೆ. ಅಧ್ಯಾತ್ಮವಿದ್ಯೆಗೆ **ಪರಾವಿದ್ಯೆ** ಎಂದು ಮುಂಡಕೋಪನಿಷತ್ತಿನಲ್ಲೂ **ವಿದ್ಯೆ** ಎಂದು ಈಶಾವಾಸ್ಯೋಪನಿಷತ್ತಿನಲ್ಲೂ ಹೇಳಿದೆ. ಲೌಕಿಕ ವಿದ್ಯೆಯು ಇಹಲೋಕದ ಜೀವನಕ್ಕೆ ಸಂಬಂಧಿಸಿದ ಅಗತ್ಯಗಳನ್ನು ಪೂರೈಸಿಕೊಳ್ಳಲು ಬೇಕಾದ ಧನಾರ್ಜನೆಯ ಮಾರ್ಗವನ್ನು ಕಲಿಸಿದರೆ, ಅಧ್ಯಾತ್ಮವಿದ್ಯೆಯು ಶಾಶ್ವತಸುಖವನ್ನು ಪಡೆಯುವ ಮಾರ್ಗವನ್ನು ಬೋಧಿಸುತ್ತದೆ. ಅಧ್ಯಾತ್ಮವಿದ್ಯೆ ಅಮೃತತ್ವಪ್ರಾಪ್ತಿಗೆ ಪೂರಕವಾದರೆ ಲೌಕಿಕವಿದ್ಯೆ ಪರೋಕ್ಷವಾಗಿ ಅಮೃತತ್ವಪ್ರಾಪ್ತಿಗೆ ಸಹಾಯಕ.

ಧರ್ಮವನ್ನು ಗಳಿಸಲು ಮೊಟ್ಟ ಮೊದಲ ಸಾಧನ ಶರೀರ (**ಶರೀರಮಾದ್ಯಂ ಖಲು ಧರ್ಮಸಾಧನಂ**—ಕುಮಾರಸಂಭವ ೫.೩೩). ಶರೀರವನ್ನು ಕಾಪಾಡಿಕೊಳ್ಳಲು ಇದರ ಹಸಿವು ಮೊದಲಾದ ಅಗತ್ಯಗಳನ್ನು ಪೂರೈಸಬೇಕು. ಈ ಅಗತ್ಯಗಳನ್ನು ಪೂರೈಸಲು ಧನ ಬೇಕು. ಈ ಧನವನ್ನು ನ್ಯಾಯವಾಗಿ ಸಂಪಾದಿಸುವ ಮಾರ್ಗವನ್ನು ಲೌಕಿಕ ವಿದ್ಯೆ ಕಲಿಸಿಕೊಡುತ್ತದೆ. ಹೀಗೆ ಅಧ್ಯಾತ್ಮ ವಿದ್ಯೆಯನ್ನು ಪಡೆಯಲು ಸಾಧನವಾಗಿರುವ ಶರೀರವನ್ನು ಲೌಕಿಕ ವಿದ್ಯೆಯಿಂದ ಕಾಪಾಡಿಕೊಳ್ಳುತ್ತ, ದಾನಕ್ರಿಯಾದಿಗಳಿಂದ ಮನಶ್ಶುದ್ಧಿ ಪಡೆದುಕೊಂಡು ತನ್ಮೂಲಕ ಅಧ್ಯಾತ್ಮವಿದ್ಯೆಯಿಂದ ಶಾಶ್ವತಸುಖವನ್ನು ಪಡೆಯಬೇಕು. ಇದನ್ನು ಈಶಾವಾಸ್ಯೋಪನಿಷತ್ತಿನಲ್ಲಿ ಹೀಗೆ ಹೇಳಿದೆ:

**ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಂ ಸಹ |**
**ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ ||**
(೧೧)

"ಯಾವನು ವಿದ್ಯೆ ಮತ್ತು ಅವಿದ್ಯೆ—ಎರಡನ್ನೂ ಒಟ್ಟಿಗೆ ಅರಿಯುತ್ತಾನೋ ಅವನು ಅವಿದ್ಯೆಯಿಂದ ಮೃತ್ಯುವನ್ನು (ಶರೀರದ ಹಸಿವು ಮೊದಲಾದ ಅಗತ್ಯಗಳನ್ನು) ದಾಟಿ, ವಿದ್ಯೆಯಿಂದ ಅಮೃತತ್ವವನ್ನು ಪಡೆಯುತ್ತಾನೆ."

ಹೀಗೆ ಒಂದೊಂದು ದೈವೀ ಗುಣವೂ ಅಮೃತತ್ವಪ್ರಾಪ್ತಿಗೆ ಸಾಧನ. ಆದರೆ ಇವುಗಳನ್ನು ಮೈಗೂಡಿಸಿಕೊಳ್ಳಲು ಸತತ ಪ್ರಯತ್ನ ಬೇಕು. ಈ ಮಾರ್ಗದಲ್ಲಿ (ಗಳಲ್ಲಿ) ನಡೆಯುತ್ತಲೇ ಇರಬೇಕು. "ಸರಿಯಾದ ದಿಕ್ಕಿನಲ್ಲಿ ನಡೆಯುತ್ತಿದ್ದೇವೆಯೇ?" ಎಂದು ಪರೀಕ್ಷಿಸಿಕೊಳ್ಳುತ್ತಲೇ ಇರಬೇಕು. ತಪ್ಪಿದಲ್ಲಿ ಶಾಸ್ತ್ರಗಳ, ಇತರ ಸಾಧಕರ, ಗುರುವಿನ ಸಹಾಯದಿಂದ ಸರಿಪಡಿಸಿಕೊಳ್ಳುತ್ತಲೇ ಇರಬೇಕು. "ಹಾಲಿನಲ್ಲಿ ತುಪ್ಪವು ಅಡಗಿರುವಂತೆ ಪ್ರತಿಯೊಂದರಲ್ಲೂ ಅಡಗಿರುವ ಈ ವಿಶೇಷ ತತ್ತ್ವವನ್ನು ಪಡೆಯಲು ಮನಸ್ಸೆಂಬ ಕಡೆಗೋಲಿನಿಂದ ಸತತವೂ ಕಡೆಯಬೇಕು" ಎಂಬ ಈ ಉಪನಿಷತ್ತಿನ ಮಂತ್ರವನ್ನು ನೋಡಿ:

**ಘೃತಮಿವ ಪಯಸಿ ನಿಗೂಢಂ ಭೂತೇ ಭೂತೇ ವಸತಿ ವಿಜ್ಞಾನಂ|**
**ಸತತಂ ಮಂಥಯಿತವ್ಯಂ ಮನಸಾ ಮಂಥಾನಭೂತೇನ ||**
(ಅಮೃತಬಿಂದೂಪನಿಷತ್, ೨೦)

ಸತತವಾದ ಪ್ರಯತ್ನ ಸರಿಯಾದ ರೀತಿಯಲ್ಲಿದ್ದರೆ ಅಮೃತತ್ವಪ್ರಾಪ್ತಿ ನಿಶ್ಚಿತ. ಏಕೆಂದರೆ **ನಾವೆಲ್ಲರೂ ಅಮೃತದ ಪುತ್ರರೇ** ಎಂದು ಸಾರುತ್ತದೆ. **ಶೃಣ್ವಂತು ವಿಶ್ವೇ ಅಮೃತಸ್ಯ ಪುತ್ರಾಃ** (ಋ.ವೇ. ೧೦.೧೩.೧) ಎಂಬ ಈ ವೇದೋಕ್ತಿ.